

ಕೋಲಾರ ಜಿಲ್ಲಾ ಪೊಲೀಸ್

-- ಪ್ರಕಟಣೆ --



# ನಿಮ್ಮ ವಾಹನ ಅಪಘಾತಕ್ಕೀಡಾಗಿದೆಯೇ?

# ಅಥವಾ

# ಅಪಘಾತ ಮಾಡಿರುತ್ತೀರಾ?

## ಚಿಂತಿಸಬೇಡಿ....!!! ನಿಮಗಾಗಿ ಉಚಿತ ಸೇವೆಗಳು

1. ರಸ್ತೆ ಅಪಘಾತಕ್ಕೆ ಒಳಗಾದ ವಾಹನಗಳನ್ನು ಅಪಘಾತ ಸ್ಥಳದಿಂದ ಪೊಲೀಸ್ ವೆಚ್ಚದಲ್ಲಿ ಉಚಿತವಾಗಿ ಪೊಲೀಸ್ ಠಾಣೆಗೆ ಸಾಗಿಸಲಾಗುವುದು.



2. ರಸ್ತೆ ಅಪಘಾತಕ್ಕೀಡಾದ ವಾಹನಗಳನ್ನು ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ 48 ಗಂಟೆಗಳ ಒಳಗಾಗಿ ಉಚಿತವಾಗಿ ತಪಾಸಣೆ ಮಾಡಿಸಲಾಗುವುದು.

**ಜಿಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿ, ಕೋಲಾರ ☎ 08152-222039**

3. ರಸ್ತೆ ಅಪಘಾತಕ್ಕೀಡಾದ ವಾಹನಗಳನ್ನು ಮೋಟಾರು ವಾಹನ ನಿರೀಕ್ಷಕರವರಿಂದ ತಪಾಸಣೆಯಾದ ನಂತರ ಆರ್.ಸಿ.ಬುಕ್, ಚಾಲನಾ ಪರವಾನಿಗೆ, ಇನ್ಸೂರೇನ್ಸ್ ಪ್ರತಿ, ಮತ್ತು ಇತರ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿ ಐಎಂವಿ ನಮೂನೆ-133 ಭರ್ತಿ ಮಾಡಿ, 100/- ರೂ. ಮೌಲ್ಯದ ಇ-ಸ್ಟಾಂಪ್ ಪೇಪರ್‌ನ ಇಂಡಿಮಿನಿಟಿ ಬಾಂಡ್ ಸಲ್ಲಿಸಿದ್ದಲ್ಲಿ ಠಾಣೆಯಲ್ಲಿಯೇ ವಾಹನವನ್ನು ಮಾಲೀಕರ ವಶಕ್ಕೆ ನೀಡಲಾಗುವುದು.

(ಸೂಚನೆ;- ಇ-ಸ್ಟಾಂಪ್ ಪೇಪರನ್ನು ವಾಹನದ ಮಾಲಕರು ಸಂಬಂಧಪಟ್ಟ ಪೊಲೀಸ್ ಠಾಣೆಯ ಹೆಸರಿನಲ್ಲಿ ಖರೀದಿಸುವುದು.)

4. ಸಾವು ಸಂಭವಿಸಿರುವ ಅಥವಾ ಸಂಭವಿಸದೇ ಇರುವ ರಸ್ತೆ ಅಪಘಾತ ಪ್ರಕರಣಗಳು ಜಾಮೀನಿನ ಅಪರಾಧಗಳಾಗಿದ್ದು, ಆರೋಪಿ ಚಾಲಕನನ್ನು ಪೊಲೀಸ್ ಠಾಣೆಯಲ್ಲಿಯೇ ಜಾಮೀನು ಮುಚ್ಚಳಿಕೆ ಪಡೆದು ಬಿಡುಗಡೆ ಮಾಡಲಾಗುವುದು.

   ಆದರೆ ಆರೋಪಿ ಚಾಲಕನು ಮದ್ಯಪಾನ ಮಾಡಿ ವಾಹನ ಚಲಾಯಿಸಿ ಅಪಘಾತ ಉಂಟುಮಾಡಿ ವ್ಯಕ್ತಿಯ ಸಾವಿಗೆ ಅಥವಾ ಹೆಚ್ಚು ಜನರ ಸಾವು ನೋವುಗಳಿಗೆ ಕಾರಣನಾದರೆ ಅಥವಾ ಮೇಲ್ನೋಟಕ್ಕೆ ಸಾವನ್ನು ಉಂಟುಮಾಡಿರುವ ಅಪಘಾತವು ಆರೋಪಿ ಚಾಲಕನ ತಿಳುವಳಿಕೆಯ ನಿರ್ಲಕ್ಷತೆಯಿಂದ ಉಂಟಾಗಿರುವುದು ಕಂಡುಬರುವ ಸಂದರ್ಭಗಳಲ್ಲಿ ಆರೋಪಿ ಚಾಲಕನಿಗೆ ಪೊಲೀಸ್ ಠಾಣೆಯಲ್ಲಿ ಜಾಮೀನು ನೀಡಲಾಗುವುದಿಲ್ಲ.






5. ರಸ್ತೆ ಅಪಘಾತ ಪ್ರಕರಣಗಳಲ್ಲಿ ನೊಂದವರಿಗೆ ವಿಮೆ ಪಡೆಯಲು ಅನುಕೂಲವಾಗುವಂತೆ ಉಚಿತವಾಗಿ ಪೊಲೀಸ್ ಠಾಣೆಯಿಂದ ಜಿಲ್ಲಾ ಟ್ರಿಬ್ಯೂನಲ್"ನ್ಯಾಯಾಲಯಕ್ಕೆ ಹಾಗೂ ವಿಮಾ ಕಛೇರಿಗಳಿಗೆ ದೃಢೀಕೃತ ದಾಖಲಾತಿಗಳನ್ನು ಒದಗಿಸಲಾಗುವುದು.

6. ಸಾವು ಸಂಭವಿಸಿದ ಅಪಘಾತ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಅಪಘಾತ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ, ಆರೋಪಿ ಚಾಲಕರುಗಳು ಖುದ್ದು ನ್ಯಾಯಾಲಯಕ್ಕೆ ಹಾಜರಾಗಿ, ತಾವು ಮಾಡಿದ ಅಘಘಾತದ ತಪ್ಪನ್ನು ಒಪ್ಪಿಕೊಂಡು ಮಾನ್ಯ ನ್ಯಾಯಾಲಯವು ವಿಧಿಸುವ ದಂಡವನ್ನು ಕಟ್ಟಿ ಯಾವುದೇ ವಿಳಂಬವಿಲ್ಲದೆ, ಮಧ್ಯವರ್ತಿಗಳ ಸಹಾಯವಿಲ್ಲದೆ ಒಂದೇ ದಿನದಲ್ಲಿ ಇಂತಹ ಪ್ರಕರಣಗಳನ್ನು ಮುಕ್ತಾಯ ಮಾಡಬಹುದಾಗಿರುತ್ತದೆ.



**ಮೇಲ್ಕಂಡ ಎಲ್ಲಾ ಸೇವೆಗಳು ಶುಲ್ಕರಹಿತವಾಗಿದ್ದು, ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು, ಸದರಿ ಸೇವೆ ನೀಡುವಲ್ಲಿ ನಿಮ್ಮಿಂದ ಏನಾದರೂ ಆಪೇಕ್ಷಿಸಿದ್ದಲ್ಲಿ /ವಿನಾಕಾರಣ ವಿಳಂಭ ಮಾಡಿದ್ದಲ್ಲಿ, ಈ ಕೆಳಕಂಡ ಅಧಿಕಾರಿಯವರುಗಳನ್ನು ಸಂಪರ್ಕಿಸಿ.**

| | | |
|---|---|---|
| **ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ** | – | 9480802601 |
| ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ | – | 9480802602 |
| ಪೊಲೀಸ್ ಉಪಾಧೀಕ್ಷಕರು, ಕೋಲಾರ ಉಪ–ವಿಭಾಗ | – | 9480802620 |
| ಪೊಲೀಸ್ ಉಪಾಧೀಕ್ಷಕರು, ಮುಳಬಾಗಿಲು ಉಪ–ವಿಭಾಗ | – | 9480802621 |

* ಪ್ರಕರಣದ ತನಿಖಾ ಕ್ರಮವನ್ನು ಕಾನೂನು ರೀತಿಯಲ್ಲಿ ಜರುಗಿಸಲಾಗುವುದು * - ಮೇಲ್ಕಂಡ ಅಂಶಗಳು ಸಾರ್ವಜನಿಕರಿಗೆ ಸಾಮಾನ್ಯ ತಿಳುವಳಿಕೆಗಾಗಿ -

**ಸದಾ ಸಾರ್ವಜನಿಕರ ಸೇವೆಯಲ್ಲಿ.....**

**ಕೋಲಾರ ಜಿಲ್ಲಾ ಪೊಲೀಸ್ .......**